ಈ) ಈ ಸಂಬಂಧದಲ್ಲಿ ಖಾಸಗಿ ಎಜೆನ್ಸಿಗಳಿಂದ ಈಗಾಗಲೇ ಎಕ್ಸ್‌ಪ್ರೆಶನ್ ಆಫ್ ಇನ್‌ಟ್ರಸ್ಟ್ ಗಳಿಗಾಗಿ ಕರೆಯಲಾಗಿದ್ದು, ಸದರಿ ಕಾರ್ಯ ಪ್ರಗತಿಯಲ್ಲಿರುತ್ತದೆ

ಉ & ಊ) ಸದರಿ ಯೋಜನೆಯನ್ನು ದಿ-ಬೂಟ್ ಆಧಾರದ ಮೇಲೆ ಕೈಗೆತ್ತಿಕೊಳ್ಳಲಾಗುತ್ತಿರುವುದರಿಂದ ಖಾಸಗಿಯವರು ನಿರ್ಮಾಣ ಮತ್ತು ನಿರ್ವಹಣೆ ಮಾಡುವುದರಿಂದ ಸ್ಥಳೀಯ ಶಾಸಕರ ನಿಧಿಯಿಂದ ಕೈಗೆತ್ತಿಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ

1453 (1686) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) – ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದ ಗಾಂಧಿನಗರದಲ್ಲಿರುವ ಮಾರಾಟ ತೆರಿಗೆ ಆಯುಕ್ತರ ಹಾಗೂ ಇತರೆ ಸರ್ಕಾರಿ ಕಛೇರಿಗಳು ಶಿಥಿಲಗೊಂಡಿರುವ ಕಟ್ಟಡವಲ್ಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಗಮನಕ್ಕೆ ಬಂದಿದ್ದರೆ ಇಂತಹ ಸರ್ಕಾರಿ ಕಟ್ಟಡಗಳ ನಿರ್ವಹಣೆ ಜವಾಬ್ದಾರಿ ಯಾರ ವ್ಯಾಪ್ತಿಗೆ ಬರುತ್ತದೆ?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಬೆಂಗಳೂರು ನಗರದ ಗಾಂಧಿನಗರದಲ್ಲಿರುವ ಮಾರಾಟ ತೆರಿಗೆ ಆಯುಕ್ತರ ಹಾಗೂ ಇತರೆ ಸರ್ಕಾರಿ ಕಛೇರಿಗಳು ಖಾಸಗಿ ಕಟ್ಟಡದಲ್ಲಿ ಬಾಡಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದು ಸದರಿ ಕಟ್ಟಡದ ದುರಸ್ತಿಯು ಕಟ್ಟಡದ ಮಾಲೀಕರಿಗೆ ಸಂಬಂಧಿಸಿರುತ್ತದೆ

ಗಾಂಧಿನಗರದ ಕೆಂಪೇಗೌಡ ರಸ್ತೆಯಲ್ಲಿ ವಾಣಿಜ್ಯ ತೆರಿಗೆ ಕಛೇರಿಯು ಸರ್ಕಾರಿ ಬಹುಮಹಡಿ ಕಟ್ಟಡದಲ್ಲಿದ್ದು ಸದರಿ ಸರ್ಕಾರಿ ಕಟ್ಟಡ ಸುಸ್ಥಿತಿಯಲ್ಲಿರುತ್ತದೆ

ಆ) ಮಾರಾಟ ತೆರಿಗೆ ಆಯುಕ್ತರ ಹಾಗೂ ಇತರೆ ಸರ್ಕಾರಿ ಕಛೇರಿಗಳಿರುವ ಕಟ್ಟಡವು ಖಾಸಗಿಯವರಿಗೆ ಸೇರಿದ್ದು ಕಟ್ಟಡದ ನಿರ್ವಹಣೆಯ ಜವಾಬ್ದಾರಿಯು ಕಟ್ಟಡದ ಮಾಲೀಕರ ವ್ಯಾಪ್ತಿಗೆ ಬರುತ್ತದೆ

ಗಾಂಧಿನಗರದ ಕೆಂಪೇಗೌಡ ರಸ್ತೆಯಲ್ಲಿರುವ ವಾಣಿಜ್ಯ ತೆರಿಗೆ ಕಛೇರಿಯು ಸರ್ಕಾರಿ ಬಹುಮಹಡಿ ಕಟ್ಟಡದಲ್ಲಿದ್ದು, ಸದರಿ ಕಟ್ಟಡ ನಿರ್ವಹಣೆಯನ್ನು ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ವಹಿಸುತ್ತಿದ್ದು ಕಟ್ಟಡವು ಸುಸ್ಥಿತಿಯಲ್ಲಿರುತ್ತದೆ

1454 (1989) ಶ್ರೀ ಐವಾನ್ ನಿಗ್ಲಿ, ಎಂಎಲ್ಎ (ನಾಮಾಂಕಿತ) – ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಸ್ಕೈವಾಕ್ಸ್‌ಗಳನ್ನು ನಿರ್ಮಿಸಲು ಬಿಡ್‌ದಾರರನ್ನು ಪಡೆಯಲು ಸರ್ಕಾರವು ಯಶಸ್ವಿಯಾಗಿದೆಯೇ,

ಆ) ಹಾಗಿದ್ದಲ್ಲಿ, ಸ್ಕೈ ವಾಕ್ಸ್‌ಗಳನ್ನು ನಿರ್ಮಿಸಲು ಸಲ್ಲಿಸಿರುವ ಬಿಡ್‌ದಾರರ ಸಂಖ್ಯೆ,

ಇ) ಪ್ರತಿಯೊಂದು ಯೋಜನೆಯಲ್ಲಿ ಒಳಗೊಂಡಿರುವ ವೆಚ್ಚ,

ಈ) ಸ್ಕೈ ವಾಕ್ಸ್‌ಗಳನ್ನು ಮತ್ತು ಕ್ಯಾಪ್ಸುಲ್ ಲಿಫ್ಟ್‌ಗಳನ್ನು ನಿರ್ಮಿಸಲು ಗುರುತಿಸಿರುವ ಜಾಗ/ಜಂಕ್ಷನ್‌ಗಳ ಸಂಖ್ಯೆ(ಪ್ರದೇಶಗಳ ವಿವರಗಳನ್ನು ಒದಗಿಸುವುದು),

ಉ) ಕೆ ಆರ್ ಪುರಂ, ಕೇಬಲ್ ಬ್ರಿಡ್ಜ್ ಹತ್ತಿರ ಟಿನ್ ಫ್ಯಾಕ್ಟರಿ ಬಳಿ ಹೆಚ್ಚು ಸಂಚಾರದ ಒತ್ತಡ ಇರುವ ಜಂಕ್ಷನ್ ಪ್ರಸ್ತಾವನೆಯಲ್ಲಿ ಒಳಗೊಂಡಿದೆಯೇ,

ಊ) ಇಲ್ಲದಿದ್ದಲ್ಲಿ, ಅದಕ್ಕೆ ಕಾರಣಗಳೇನು?

ಶ್ರೀ ಹೆಚ್ ಡಿ ಕುಮಾರಸ್ವಾಮಿ (ಮುಖ್ಯಮಂತ್ರಿಗಳು)

ಅ) ಹೌದು

ಆ) ಇಂದಿನವರೆಗೆ 73 ಏಜೆನ್ಸಿಗಳು ತಮ್ಮ ಎಕ್ಸ್‌ಪೆಶನ್ ಆಫ್ ಇನ್‌ಟ್ರಸ್ಟ್ ಸಲ್ಲಿಸಿರುತ್ತಾರೆ

ಇ) ಸದರಿ ಯೋಜನೆಯನ್ನು ದಿ–ಬೂಟ್ ಆಧಾರದ ಮೇಲೆ (ಡಿಸೈನ್, ಬಿಲ್ಡ್, ಆಪರೇಟ್, ಟ್ರಾನ್ಸ್‌ಫರ್) ತೆಗೆದುಕೊಳ್ಳಲು ಉದ್ದೇಶಿಸಲಾಗಿದ್ದು, ಪ್ರತಿಯೊಂದು ಸ್ಕೈವಾಕ್ ನ ವೆಚ್ಚವು ರೂ 100 ರಿಂದ ರೂ 120 ಕೋಟಿ ಎಂದು ಅಂದಾಜು ಮಾಡಲಾಗಿದೆ